ತಾವು ರಚಿಸಿದ ಗಾಳಿಪಟಗಳೊಂದಿಗೆ ಆಗಮಿಸಿ ದಿನಪೂರ್ತಿ ಸಂಭ್ರಮಿಸಿದ ವಿದ್ಯಾರ್ಥಿಗಳು

# ಎನ್‌ಐಟಿಕೆ ಕಡಲತಡಿಯಲ್ಲಿ ಕಂಡಿತು ಉಡಾನ್ ಉತ್ಸಾಹ!

**ಮಂಗಳೂರು:** ಎನ್‌ಐಟಿಕೆಯ ಕಡಲತಡಿ ಶನಿವಾರ ರಂಗು ರಂಗಿನಿಂದ ತುಂಬಿತ್ತು. ಒಂದೆಡೆ ಬೀಚ್ ಉತ್ಸವದ ಗೌಜಿಯಾದರೆ ಇನ್ನೊಂದೆಡೆ ಗಾಳಿಪಟ ಸ್ಪರ್ಧೆಯ ಪೈಪೋಟಿ ಜೋರಾಗಿಯೇ ಸಾಗಿತ್ತು.

**ತಾವೇ ಕಲಾಕೃತಿ ರಚಿಸಿದರು!**

ವಿದ್ಯಾರ್ಥಿಗಳು ತಾವು ರಚಿಸಿದ ಗಾಳಿಪಟಗಳೊಂದಿಗೆ ಆಗಮಿಸಿ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು. ಇನ್ನೊಂದೆಡೆ ಕಲಾಕೃತಿ ರಚನೆಯಲ್ಲಿ ಕೆಲ ವಿದ್ಯಾರ್ಥಿಗಳು ಬ್ಯುಸಿಯಾಗಿಬಿಟ್ಟಿದ್ದರು. ವಿದ್ಯಾರ್ಥಿಗಳು ಸೇರಿದಂತೆ ನೂರಾರು ಸಂಖ್ಯೆಯಲ್ಲಿ ಜನತೆ ಪಾಲ್ಗೊಂಡು ಸಂಭ್ರಮಪಟ್ಟರು. ಗಾಳಿಪಟ ಸ್ಪರ್ಧೆಯಲ್ಲಿ ಹಲವು ಮಂದಿ ಭಾಗವಹಿಸಿದ್ದರು.



ಆಹಾ ಪಟಾಪಟಾ ಗಾಳಿಪಟ

**ಕಳೆದ 15 ವರ್ಷಗಳಿಂದ...**

ಎನ್‌ಐಟಿಕೆ ವತಿಯಿಂದ ಕಳೆದ 15 ವರ್ಷಗಳಿಂದ ಈ ಉತ್ಸವವನ್ನು ಆಯೋಜಿಸುತ್ತಾ ಬರಲಾಗಿದೆ. ಉತ್ಸವದಲ್ಲಿ ಆಹಾರ ಮಳಿಗೆಗಳು, ಸಂಗೀತ, ಹಗ್ಗ ಜಗ್ಗಾಟ, ಸ್ಯಾಕ್ ರೇಸ್, ಟ್ವಿಸ್ಟರ್ ಸೇರಿದಂತೆ ಇಲ್ಲಿ ಹಲವು ರೀತಿ ಆಟೋಟ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.

**ಉಡಾನ್!!**

**ಪ್ರತಿವರ್ಷದಂತೆ ಈ ವರ್ಷ ಕೂಡ ಎನ್‌ಐಟಿಕೆ ವತಿಯಿಂದ ಎನ್‌ಐಟಿಕೆಯ ಕಲಾವಿದರ ಒಕ್ಕೂಟದ ವತಿಯಿಂದ ಉಡಾನ್ ಶೀರ್ಷಿಕೆಯಡಿ ಎನ್‌ಐಟಿಕೆ ಬೀಚ್‌ನಲ್ಲಿ ಈ ಉತ್ಸವವನ್ನು ಆಯೋಜಿಸಲಾಗಿತ್ತು.**

Hosa Diganta, Date: 15/01/23, p. no- Sangama 04